# ನಿಮ್ಮೊಡನೆ

## ಪರಿಸರ ಕಾಳಜಿಗಾಗಿ ಎಲ್ಲರ ದನಿ

ನಿಮ್ಮ ಧ್ವನಿ ಏರಿಸಿ; ಸಮುದ್ರಮಟ್ಟವನ್ನಲ್ಲ– ಇದು 2014ರ ವಿಶ್ವ ಪರಿಸರ ದಿನಾಚರಣೆಯ ಘೋಷವಾಕ್ಯ. ಪರಿಸರ ಕಾಳಜಿಗಾಗಿ ಸಾರ್ವಜನಿಕರ ಸಹಭಾಗಿತ್ವವನ್ನು ಬಯಸುವ ನಿರೀಕ್ಷೆಯಿಂದ ರೂಪುಗೊಂಡ ಘೋಷಣೆಯಿದು. ಪರಿಸರ ಸಂರಕ್ಷಣೆ ಎನ್ನುವುದೀಗ ಸಂಘಸಂಸ್ಥೆಗಳ ಅಥವಾ ಸರ್ಕಾರಗಳ ತುರ್ತಾಗಿಯಷ್ಟೇ ಉಳಿದಿಲ್ಲ. ಅದು ಜನಸಾಮಾನ್ಯರ ಮನೆಗಳ ಒಳಹೊರಗನ್ನೂ ತಲುಪಿದೆ. ಪರಿಸರ ಮಾಲಿನ್ಯದ ಬಿಸಿ ಒಂದಲ್ಲ ಒಂದು ರೀತಿಯಲ್ಲಿ ನೇರವಾಗಿ ಜನಸಾಮಾನ್ಯರನ್ನು ತಟ್ಟುತ್ತಿರುವುದರಿಂದ, ಅವರು ತಮ್ಮ ದನಿ ಎತ್ತಲೇಬೇಕಾದ ಅನಿವಾರ್ಯತೆ ಇಂದಿನದು.

ಕರ್ನಾಟಕದ ಪರಿಸ್ಥಿತಿಯನ್ನೇ ನೆನಪಿಸಿಕೊಳ್ಳಿ: ಚಕಚಕನೆ ಸಾಗುವ ಸಿನಿಮಾ ದೃಶ್ಯಗಳಂತೆ ಪರಿಸರಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಕಣ್ಣೆದುರು ಸುಳಿದುಹೋಗುತ್ತವೆ. ನಾಡಿನ ಚರಿತ್ರೆಯಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡಪ್ರಮಾಣದ ಗಣಿಗಾರಿಕೆ ಕಳೆದ ಹತ್ತು ವರ್ಷಗಳಲ್ಲಿ ನಡೆದಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಾವಿರ ಅಡಿ ಕೊರೆದರೂ ನೀರು ಸಿಗದಷ್ಟರ ಮಟ್ಟಿಗೆ ಅಂತರ್ಜಲ ಬತ್ತಿಹೋಗಿದೆ. ಆರ್ಸೆನಿಕ್ ಅಂಶವಿರುವ ನೀರನ್ನೇ ಅನಿವಾರ್ಯವಾಗಿ ಕುಡಿಯುವ ಪರಿಸ್ಥಿತಿ ಅನೇಕ ಊರುಗಳಲ್ಲಿದೆ. ರಸಗೊಬ್ಬರಗಳು ಹಾಗೂ ಕೀಟನಾಶಕಗಳ ಮಿತಿಮೀರಿದ ಬಳಕೆಯಿಂದಾಗಿ ಮಣ್ಣು ಬಂಜರಾಗುತ್ತಿದೆ, ಎಂಡೋಸಲ್ಫಾನ್ ದುಷ್ಪರಿಣಾಮಕ್ಕೆ ತುತ್ತಾದ ತಲೆಮಾರು ಕಣ್ಣೆದುರೇ ಇದೆ. ತ್ಯಾಜ್ಯದ ಗುಂಡಿಗಳಾಗುತ್ತಿರುವ ನದಿಗಳು, ಟ್ರಾಫಿಕ್ ವಿಷವೃತ್ತಗಳು, ರಸ್ತೆಗಳ ಅಗಲೀಕರಣದ ಕಾಮಗಾರಿಗಳಲ್ಲಿ ಮರಗಳ ಸವಕಳಿ, ಅಭಿವೃದ್ಧಿ ಹೆಸರಿನಲ್ಲಿ ಕಾಡಿನ ನಾಶ.. ಹೀಗೆ, ಸಾಲು ಸಾಲು ಪರಿಸರ ವಿನಾಶದ ದಾರುಣ ಚಿತ್ರಗಳು ನಮ್ಮ ಮುಂದಿವೆ. ವಿಶ್ವದ ಜೀವವೈವಿಧ್ಯ ತೊಟ್ಟಿಲುಗಳಲ್ಲೊಂದಾದ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ನಿಟ್ಟಿನಲ್ಲಿ ಸ್ಪಷ್ಟವಾದ ನಿಲುವು ತಳೆಯುವುದೂ ನಮ್ಮಿಂದ ಸಾಧ್ಯವಾಗಿಲ್ಲ. ಇವೆಲ್ಲ ಸಂಗತಿಗಳು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ನಮಗಿರುವ ನಿರ್ಲಕ್ಷ್ಯವನ್ನು ಸೂಚಿಸುವಂತಿವೆ.

ನಾಡಿನ ಚರಿತ್ರೆಯಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡಪ್ರಮಾಣದ ಗಣಿಗಾರಿಕೆ ಕಳೆದ ಹತ್ತು ವರ್ಷಗಳಲ್ಲಿ ನಡೆದಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಾವಿರ ಅಡಿ ಕೊರೆದರೂ ನೀರು ಸಿಗದಷ್ಟರ ಮಟ್ಟಿಗೆ ಅಂತರ್ಜಲ ಬತ್ತಿಹೋಗಿದೆ. ಆರ್ಸೆನಿಕ್ ಅಂಶವಿರುವ ನೀರನ್ನೇ ಅನಿವಾರ್ಯವಾಗಿ ಕುಡಿಯುವ ಪರಿಸ್ಥಿತಿ ಅನೇಕ ಊರುಗಳಲ್ಲಿದೆ. ರಸಗೊಬ್ಬರಗಳು ಹಾಗೂ ಕೀಟನಾಶಕಗಳ ಮಿತಿಮೀರಿದ ಬಳಕೆಯಿಂದಾಗಿ ಮಣ್ಣು ಬಂಜರಾಗುತ್ತಿದೆ.

ಬೆಂಗಳೂರಿನ ಪರಿಸ್ಥಿತಿಯನ್ನು ನೋಡಿ. ವಿಶ್ವದ ಅತ್ಯಂತ ಸುರಕ್ಷಿತ ನಗರಗಳಲ್ಲೊಂದು ಎನ್ನುವ ಅಗ್ಗಳಿಕೆಯ ಬೆಂಗಳೂರು ಮಹಾನಗರ ನಿಧಾನಗತಿಯಲ್ಲಿ ಅಗ್ನಿಕುಂಡವಾಗಿ ಬದಲಾಗುತ್ತಿದೆ. ಮರ ಮತ್ತು ಮನುಷ್ಯನ ನಡುವಣ ಸಂಬಂಧ ಪಲ್ಲಟಗೊಂಡಿರುವುದಕ್ಕೆ ಈ ರಾಜಧಾನಿ ನಗರ ಅತ್ಯುತ್ತಮ ಉದಾಹರಣೆ. ವ್ಯಕ್ತಿಯೊಬ್ಬನ ಉಸಿರಾಟಕ್ಕೆ ಆರು ಮರಗಳ ಅಗತ್ಯವಿದ್ದರೆ, ಬೆಂಗಳೂರಿನಲ್ಲಿ ಲಭ್ಯವಿರುವುದು ಆರು ಮನುಷ್ಯರಿಗೊಂದು ಮರ! ಕೈಗಾರಿಕಾ ಪ್ರದೇಶಗಳಲ್ಲಿ ಶೇ 30ರಷ್ಟು ಪ್ರದೇಶದಲ್ಲಿ ಮರಗಳನ್ನು ಬೆಳೆಸಬೇಕು ಎನ್ನುವುದು ಸೂಚನೆಯಾಗಿಯಷ್ಟೇ ಉಳಿದಿದೆ. ಗಗನಚುಂಬಿ ಅಪಾರ್ಟ್‌ಮೆಂಟ್‌ಗಳು, ಮೆಟ್ರೋ ಕಾಮಗಾರಿ, ರಸ್ತೆಗಳ ಅಗಲೀಕರಣ– ಇವೆಲ್ಲವೂ ಮರಗಳ ಮಾರಣಹೋಮಕ್ಕೆ ಕಾರಣವಾಗಿವೆ. ನೀರಿನ ಸಮಸ್ಯೆಯಿದ್ದರೂ ಮಳೆನೀರು ಸಂಗ್ರಹ ಇಲ್ಲಿ ಕಡ್ಡಾಯವಲ್ಲ. ಕಸದ ವಿಲೇವಾರಿ ಸಮಸ್ಯೆ ಪ್ರತಿವರ್ಷ ಬಾಧಿಸಿದರೂ ಮನೆಗಳಲ್ಲಿ ತ್ಯಾಜ್ಯವನ್ನು ಕರಗಿಸಬಹುದಾದ, ಗೊಬ್ಬರವಾಗಿ ಬದಲಿಸಬಹುದಾದ ಸಾಧ್ಯತೆಗಳ ಬಗ್ಗೆ ಉತ್ಸಾಹ ವ್ಯಕ್ತವಾಗುವುದಿಲ್ಲ. ಹಸಿರನ್ನು ಸವರುವಲ್ಲಿ ತಕ್ಷಣ ಕಾರ್ಯಪ್ರವೃತ್ತವಾಗುವ ರಾಜಕೀಯ ಹಾಗೂ ಆಡಳಿತ ವ್ಯವಸ್ಥೆ, ಮರಗಳನ್ನು ಬೆಳೆಸುವ ವಿಷಯದಲ್ಲಿ ಮಾತ್ರ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಧೋರಣೆ ಅನುಸರಿಸುತ್ತದೆ.

ನೀರು, ಗಾಳಿ, ಮಣ್ಣು, ಹಸಿರು– ಯಾವುದೂ ಪ್ರಸ್ತುತ ಶುದ್ಧರೂಪದಲ್ಲಿ ಉಳಿದಿಲ್ಲ. ವಾಯು ಮಾಲಿನ್ಯವಂತೂ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಭಾರತದಲ್ಲಿ ಜನರ ಸಾವಿಗೆ ಕಾರಣವಾಗಿರುವ ಐದು ಪ್ರಮುಖ ಅಂಶಗಳಲ್ಲಿ ವಾಯುಮಾಲಿನ್ಯವೂ ಸೇರಿದೆ. ಪ್ರತಿ ವರ್ಷ ಲಕ್ಷಾಂತರ ನಾಗರಿಕರು ವಾಯು ಮಾಲಿನ್ಯ ಸಂಬಂಧಿತ ಕಾಯಿಲೆಗಳಿಂದ ಸಾವಿಗೀಡಾಗುತ್ತಿದ್ದಾರೆ.

ಜಾಗತಿಕ ತಾಪಮಾನ ಹೆಚ್ಚುತ್ತಿರುವುದು ಪರಿಸರಕ್ಕೆ ಎದುರಾಗಿರುವ ಮತ್ತೊಂದು ದೊಡ್ಡ ಕುತ್ತು. ಮೊಬೈಲ್ ಫೋನ್‌ಗಳ ಬಳಕೆಯಿಂದ ಹಿಡಿದು, ನಮ್ಮ ಸಂಚಾರ ವ್ಯವಸ್ಥೆಯವರೆಗಿನ ದೈನಿಕದ ಅನೇಕ ಚಟುವಟಿಕೆಗಳು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗಿವೆ. ಉಷ್ಣಾಂಶದ ಈ ಹೆಚ್ಚಳದಿಂದಾಗಿ ಧ್ರುವಪ್ರದೇಶಗಳಲ್ಲಿನ ಮಂಜು ಕರಗಿ ನೀರಾಗಿ ಸಮುದ್ರ ಸೇರುತ್ತಿದೆ. ಹೀಗೆ ನೀರಿನ ಮಟ್ಟ ಹೆಚ್ಚುವುದರಿಂದಾಗಿ ಸಮುದ್ರದಲ್ಲಿನ ನಡುಗಡ್ಡೆಗಳು ಮುಳುಗಡೆಯಾಗುತ್ತವೆ. ಈ ಅಪಾಯಗಳ ಹಿನ್ನೆಲೆಯಲ್ಲಿ 'ನಿಮ್ಮ ಧ್ವನಿ ಏರಿಸಿ; ಸಮುದ್ರಮಟ್ಟವನ್ನಲ್ಲ' ಎನ್ನುವ ಘೋಷಣೆಯನ್ನು ಗಮನಿಸಬೇಕಾಗಿದೆ.

ಇಷ್ಟಕ್ಕೂ ಪರಿಸರ ಸಂರಕ್ಷಣೆಗಾಗಿ ಧ್ವನಿ ಏರಿಸುವುದಾದರೂ ಹೇಗೆ? ಅದು ಸರ್ಕಾರದ ಜವಾಬ್ದಾರಿ ಎಂದು ಸುಮ್ಮನಿರುವಂತಿಲ್ಲ. ಪರಿಸರ ಸಂರಕ್ಷಣೆಯ ಮೊದಲ ಪಾಠ ಮನೆಯಿಂದಲೇ ಆಗಬೇಕಾಗಿದೆ. ವೈಯಕ್ತಿಕ ನೆಲೆಯ ಈ ಕಾಳಜಿ ಸಾರ್ವತ್ರಿಕವಾಗುವ ಮೂಲಕ ಪರಿಸರ ಸಂರಕ್ಷಣೆ ಸಾಧ್ಯವಾಗಬೇಕಾದುದು ಈ ಹೊತ್ತಿನ ಅನಿವಾರ್ಯ.

■ ರಘುನಾಥ ಚ.ಹ.



ಈಶ್ವರ್